# 1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ನಂಜನಗೂಡು.

## ಸಿಸಿ ಸಂಖ್ಯೆ 357/2026

ಪಿರ್ಯಾದುದಾರರು : ಬಿಳಿಗೆರೆ ಪೊಲೀಸ್ ಠಾಣೆ, ನಂಜನಗೂಡು

ವಿರುದ್ಧ

ಆರೋಪಿಗಳು:

| |
|---|
| ಮಹದೇವಸ್ವಾಮಿ ಬಿನ್ ಸಿದ್ದಪ್ಪ ಉ.ಸಿದ್ದಶೆಟ್ಟಿ 35 ವರ್ಷ<br>ವಾಸ:ಆಲಂಬೂರು ಗ್ರಾಮ, ನಂಜನಗೂಡು ತಾಲ್ಲೂಕು |

*** *** ***

ಆಪಾದನೆ

ಶ್ರೀಮತಿ.ಸರಿತಾ ಕುಮಾರಿ.ಎ.ಎಂ, ಬಿ.ಎ.,ಎಲ್.ಎಲ್.ಬಿ., *1*ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನಂಜನಗೂಡು ಆದ ನಾನು ಆರೋಪಿತರಾದ ನಿಮ್ಮ ಮೇಲೆ ಆಪಾದಿಸುವುದೇನೆಂದರೆ**:-**

ದಿನಾಂಕ:06.12.2025 ರಂದು ಸಂಜೆ ಸುಮಾರು 07:30 ಗಂಟೆ ಸಮಯದಲ್ಲಿ ನಂಜನಗೂಡು ತಾಲ್ಲೂಕು ಬಿಳಿಗೆರೆ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಬಿಳಿಗೆರೆ ಗ್ರಾಮದ ಬಳಿ ಇರುವ ಪೆಟ್ರೋಲ್ ಬಂಕ್ ಹಾಗೂ ಬಿಳಿಗೆರೆ ಗ್ರಾಮದ ರಾಜಪ್ಪರವರ ಜಮೀನಿನ ಬಳಿ ದಕ್ಷಿಣೋತ್ತರವಾಗಿ ಹಾದು ಹೋಗಿರುವ ಬಿಳಿಗೆರೆ-ಸುತ್ತೂರು ರಸ್ತೆಯಲ್ಲಿ ಚಾಸಾ. 2 ರಿಂದ 4 ರವರು ಬಿಳಿಗೆರೆ ಗ್ರಾಮದ ಬಸ್ ನಿಲ್ದಾಣದಿಂದ ಬಸ್ ನಲ್ಲಿ ಇಳಿದು ಸುತ್ತೂರು ಗ್ರಾಮಕ್ಕೆ ರಸ್ತೆಯ ಎಢಭಾಗದಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿಯಾದ ನೀವು KA09 JR-6120 ರ ನಂಬರಿನ ಯಮಹಾ ಎಮ್ ಟಿ- 15 ಬೈಕ್ ಅನ್ನು ಹಿಂಬದಿಯಿಂದ ಅಂದರೆ

ಬಿಳಿಗೆರೆ ಗ್ರಾಮದ ಕಡೆಯಿಂದ ಅತಿವೇಗವಾಗಿ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಚಾಸಾ. 2 ರಿಂದ 4 ರವರಿಗೆ ಡಿಕ್ಕಿ ಮಾಡಿ ಅಪಘಾತಪಡಿಸಿರುತ್ತೀರಿ. ಆದ್ದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆಯ ಕಲಂ.281 ರಡಿಯಲ್ಲಿ ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ

ಕೊನೆಯದಾಗಿ, ಅದೇ ದಿನ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಮಾಡಿದ ಸದರಿ ಅಪಘಾತದಿಂದ ಚಾಸಾ.2 ರಿಂದ 4 ರವರು ರಸ್ತೆಯಲ್ಲಿ ಕೆಳಕ್ಕೆ ಬಿದ್ದು ಚಾಸಾ. 2 ರವರ ಬಲಕಾಲಿನ ಮೂಳೆ ಮುರಿದು, ಬಲಕಾಲಿನ ಮಂಡಿಗೆ, ಎಡಗೈ, ಭುಜ ಮತ್ತು ತೋಳಿಗೆ ಪೆಟ್ಟು ಬಿದ್ದು ತೀವ್ರ ಸ್ವರೂಪದ ಹಾಗೂ ಬಲಕಾಲಿನ ಕುಣಕಾಲು ಮತ್ತು ಎಡಭಾಗದ ಭುಜ ಊದಿಕೊಂಡಂತೆ ನೋವಾಗಿ ಸಾಮಾನ್ಯ ಸ್ವರೂಪದ ನೋವುಂಟಾಗಿದ್ದು, ಚಾಸಾ. 3 ರವರಿಗೆ ಬಲಕಾಲಿಗೆ ಪೆಟ್ಟು ಬಿದ್ದು ತೀವ್ರ ಸ್ವರೂಪದ ನೋವುಂಟಾಗಿದ್ದು, ಎಡಭಾಗದ ಭುಜಕ್ಕೆ ಪೆಟ್ಟು ಬಿದ್ದು ಸಾಮಾನ್ಯ ಸ್ವರೂಪದ ನೋವುಂಟಾಗಿದ್ದು ಚಾಸಾ.4 ರವರಿಗೆ ಎಡಕೈನ ಮುಂಗೈಗೆ ಮತ್ತು ಎಢಭಾಗದ ನಡುವಿನ ಬಳಿ ಮತ್ತು ಬೆನ್ನು ಮೂಳೆಗೆ ಪೆಟ್ಟು ಬಿದ್ದು ಸಾಮಾನ್ಯ ಹಾಗೂ ತೀವ್ರ ಸ್ವರೂಪದ ಗಾಯವಾಗಿರುತ್ತದೆ. ಆದ್ದರಿಂದ ಆರೋಪಿಯಾದ ನೀವು ಭಾರತೀಯ ನ್ಯಾಯ ಸಂಹಿತೆ ಕಲಂ.125(ಎ-ಬಿ) ರಡಿಯಲ್ಲಿ

ದಂಡಿಸಲ್ಪಡುವ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

1. **ಈಗ ನಿಮಗೆ ಓದಿ ಹೇಳಿದ ನಿಮ್ಮ ಮೇಲಿನ ಆರೋಪ ನಿಮಗೆ ತಿಳಿಯಿತೇ?**
   **ಉಃ**

2. **ನಿಮ್ಮ ಮೇಲಿರುವ ಆರೋಪವನ್ನು ಒಪ್ಪಿಕೊಳ್ಳುವಿರಾ? ಅಥವಾ ನಿಮ್ಮ ಪರವಾಗಿ ವಿಚಾರಣೆ ನಡೆಸಲು ಬಯಸುವಿರಾ?**
   **ಉಃ**

(ಮೇಲ್ಕಂಡ ಆರೋಪವನ್ನು ಆರೋಪಿಗೆ ಓದಿ ಹೇಳಿ ಕೇಳಲಾಯಿತು. ಆರೋಪಿ ಕೊಟ್ಟ ಉತ್ತರವನ್ನು ಅವರು ಉತ್ತರಿಸಿದಂತೆಯೇ ಬರೆದುಕೊಂಡಿದ್ದು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನು ಒಳಗೊಂಡಿದೆ ಎಂದು ದಿನಾಂಕ 19.02.2026 ರಂದು ತೆಗೆದ ನ್ಯಾಯಾಲಯದಲ್ಲಿ ದೃಢೀಕರಿಸಿರುತ್ತೇನೆ.)

**1ನೇ ಹೆಚ್ಚುವರಿ** ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ.,
ನಂಜನಗೂಡು.